‘ಫ್ಯಾಬ್ರಿಕೇಶನ್ ವರ್ಕ್ ಮಾಡಿಸುವ ಅಂಗಡಿ ಇಟ್ಟುಕೊಂಡಿದ್ದಾನೆ. ಇಲ್ಲಿಯವರೆಗೂ ಕುವೈಟ್‌ನಲ್ಲಿ ಕೆಲಸ ಮಾಡುತ್ತಿದ್ದನಂತೆ. ಭಾರತಕ್ಕೆ ಬಂದು ಆರು ತಿಂಗಳಾಗಿದೆ ಅಷ್ಟೇ. ಬಿಸಿನೆಸ್ ಚೆನ್ನಾಗಿ ನಡೆಯುತ್ತಿದೆಯಂತೆ.’

‘ನಿನ್ನ ತಲೆ ಮೆಹರ್. ನಾಲ್ಕು ಮಕ್ಕಳನ್ನು ಹೆತ್ತು ಮನೆಯ ಕತ್ತಲೆ ಕೋಣೆಯಲ್ಲಿ ಕಾಲ ಹಾಕುತ್ತೀಯ? ಎಂಎಸ್ಸೀಗೆ ಸೇರ್ತೀನಿ ಎಂದವಳು ಈಗ ಇದ್ದಕ್ಕಿದ್ದಂತೆ ಮಾತು ಬದಲಾಯಿಸುತ್ತಿದ್ದೀಯಾ. ನಿನಗೇ ಮದುವೆಯಾಗಲು ಇಷ್ಟ ಇರುವಾಗ ಯಾರು ತಾನೇ ಏನು ಹೇಳಲು ಸಾಧ್ಯ?’

‘ಸುಜಿ ನನ್ನ ಇಷ್ಟ ಇಲ್ಲಿ ಯಾರು ಕೇಳಿದರು ಹೇಳು? ಐ ಹ್ಯಾವ್ ನೋ ಛಾಯ್ಸ್’

ಸುಜಾತಳ ಪರಿಚಯದವರು ಅವಳನ್ನು ಬಲವಂತವಾಗಿ ಬಸ್ಸು ಹತ್ತಿಸದೆ ಇದ್ದಿದ್ದರೆ ಅವಳು ಶಿಲೆಯಂತೆ ಕುಳಿತೇ ಇರುತ್ತಿದ್ದಳು. ಆರು ವರ್ಷಗಳ ಹಿಂದಿನ ಮಾತು. ಮೆಹರ್ ಮದುವೆಗೂ ಹೋಗಿದ್ದಳು ಸುಜಾತ. ಅಲ್ಲೇ ಅವಳಿಗೆ ಗೊತ್ತಾಗಿದ್ದು ಮೆಹರ್ ಆತನ ಎರಡನೆಯ ಹೆಂಡತಿಯೆಂದು. ಅವಳಿಗಾಗಿ ಸುರಿಸಿದ್ದ ಕಣ್ಣೀರು ಅಷ್ಟಿಷ್ಟಲ್ಲ. ಇಷ್ಟು ಸ್ಥಿತಪ್ರಜ್ಞತೆ ಈ ಮೆಹರ್‌ಗೆ ಎಲ್ಲಿಂದ ಬಂತು ಎಂಬುದಕ್ಕೆ ಉತ್ತರವೇ ಇಲ್ಲ. ಬಾರದ ನಗುವನ್ನು ಮುಖದಲ್ಲಿ ಲೇಪಿಸಿಕೊಂಡು ನಗುತ್ತಿದ್ದಾಳೆ. ನಮ್ಮ ಶಿಕ್ಷಣ ತೀರ ಇಷ್ಟು ಪೇಲವವೇ? ಒಂದಿಷ್ಟು ಧೈರ್ಯವನ್ನು ತುಂಬಿಸುವ, ಸ್ವತಂತ್ರವಾಗಿ ಬದುಕುವ ದಾರ್ಷ್ಟ್ಯವನ್ನು ನೀಡದಷ್ಟೂ ಕಳಪೆಯೇ?

ಅವಳ ಅಪ್ಪ-ಅಮ್ಮ ಓದು-ಬರಹವಿಲ್ಲದವರು. ಇವಳ ಅಕ್ಕಂದಿರು, ಅಣ್ಣ ಎಲ್ಲರೂ ನಿರಕ್ಷರಕುಕ್ಷಿಗಳು. ಓದಿದವಳೆಂದರೆ ಇವಳೊಬ್ಬಳೆ. ಆದರೆ ತನಗಿಷ್ಟವಿಲ್ಲದ ಮದುವೆಯನ್ನು ವಿರೋಧಿಸುವ ಧೈರ್ಯ ಇವಳಿಗಿಲ್ಲವೇ? ಇದನ್ನು ತಾನು ಯೋಚಿಸಿದರೆ ಏನು ಫಲ? ಮೆಹರ್ ನೆನಪಲ್ಲೇ ಸುಜಾತ ಎಂಎಸ್ಸಿ ಮುಗಿಸಿ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕೆಲಸಕ್ಕೆ ಸೇರಿದಳು. ಮೆಹರ್ ಮದುವೆಯ ದಿನ ನೋಡಿದ್ದೇ ಕೊನೆ. ಮತ್ತೆ ಅವಳನ್ನು ನೋಡಲೆ ಇಲ್ಲ. ಈಗ ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗಿ ಸಿಕ್ಕರೂ ತಾನು ಮಾನಸ ಎನ್ನುತ್ತಿದ್ದಾಳೆ. ನಮ್ಮ ಸ್ನೇಹಕ್ಕೆ ಅವಳು ಕೊಟ್ಟ ಬೆಲೆ

